OS No. 43/2022

PW-2

**(ಇಂದು ದಿಃ 15-02-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು)**

**<u>ಪಾಟೀ ಸವಾಲುಃ- 1ನೇ ಪ್ರತಿವಾದಿ ಪರ ಶ್ರೀ.NR ವಕೀಲರಿಂದಃ-</u>**

ವಾದಿ, 1 ಮತ್ತು 2ನೇ ಪ್ರತಿವಾದಿಯರ ತಾಯಿ ಹೆಸರು ಬಸಮ್ಮ, ಬಸಮ್ಮ ತೀರಿಹೋದ ದಿನಾಂಕ ಗೊತ್ತಿಲ್ಲ, ಬಸಮ್ಮ ತೀರಿಹೋಗಿ ಸುಮಾರು 30-40 ವರ್ಷ ಆಗಿದೆ. ಈಗ ಎಲ್ಲಾ ದಾವಾ ಜಮೀನುಗಳು ವಾದಿ, 1ನೇ ಮತ್ತು 2ನೇ ಪ್ರತಿವಾದಿ ಹೆಸರಿನಲ್ಲಿವೆ. ಭೀಮಶಪ್ಪ ತೀರಿಹೋದ ನಂತರ ದಾವಾ ಜಮೀನುಗಳು ವಾದಿ, 1 ಮತ್ತು 2ನೇ ಪ್ರತಿವಾದಿ ಹೆಸರಿನಲ್ಲಿ ಆಗಿವೆ. ಭೀಮಶಪ್ಪನಿಂದ ವಾದಿ, 1 ಮತ್ತು 2ನೇ ಪ್ರತಿವಾದಿಯರ ಹೆಸರಿಗೆ ದಾವಾ ಜಮೀನುಗಳು ಭೀಮಶಪ್ಪ ಬದುಕಿರುವಾಗ ಆಗಿವೆ ಅಥವಾ ತೀರಿಹೋದ ಮೇಲೆ ಆಗಿವೆ ನನಗೆ ಗೊತ್ತಿಲ್ಲ, ಭೀಮಶಪ್ಪ ಬದುಕಿರುವಾಗ ದಾವಾ ಜಮೀನುಗಳು 1 ಮತ್ತು 2ನೇ ಪ್ರತಿವಾದಿ ಹೆಸರಿಗೆ ಆಗಿದ್ದವು ಎಂದರೆ ನನಗೆ ಗೊತ್ತಿಲ್ಲ, ವಾದಿ, 1 ಮತ್ತು 2ನೇ ಪ್ರತಿವಾದಿಯರು ದಾವಾ ಜಮೀನನ್ನು ಭಾಗ ಮಾಡಿಕೊಂಡಿದ್ದರು ಎಂದರೆ ನನಗೆ ಗೊತಿತಲ್ಲ, ಭೀಮಶಪ್ಪನಿಂದ ಬಂದ ಒಟ್ಟು ಜಮೀನು ಒಂದೇ ಕಡೆ ಇದೆ. 1ನೇ ಪ್ರತಿವಾದಿ ತನ್ನ ಹೆಸರಿನಲ್ಲಿದ ಜಮೀನು ಪೈಕಿ ಸ್ವಲ್ಪ ಜಮೀನು ಮಾರಾಟ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ, ಖರಿದಿ ಪಡೆದುಕೊಂಡವರು ಸದರಿ ಜಮೀನಿನಲ್ಲಿ ಸ್ವಾಧಿನದಲ್ಲಿದ್ದಾರೆ ಎಂದರೆ ನನಗೆ ಗೊತ್ತಿಲ್ಲ, 2ನೇಪ್ರತಿವಾದಿ ಮಾರಾಟ ಮಾಡಿ ಸುಮಾರು 20 ವರ್ಷ ಆಗಿದೆ ಎಂದರೆ ನನಗೆ ಗೊತಿಲ್ಲ, 2ನೇ ಪ್ರತಿವಾದಿ ತನ್ನ ಹೆಸರಿನಲ್ಲಿದ್ದ ಉಳಿದ ಜಮೀನನ್ನು ತನ್ನ ಮಗನ ಹೆಸರಿಗೆ ಯಾವ ವರ್ಷ ಮಾಡಿದ್ದರು ಎಂದರೆ ನನಗೆ ಗೊತಿಲ್ಲ, ಸಾಕ್ಷಿ ಮುಂದುವರೆದು ಒಟ್ಟಿಗೆ ಇದ್ದರು ಎಂದು ಹೇಳುತ್ತಾರೆ. ಈಗ ದಾವಾ ಜಮೀನುಗಳ ಪಹಣಿಗಳು ಯಾರ ಹೆಸರಿನಲ್ಲಿವೆ ನನಗೆ ಗೊತ್ತಿಲ್ಲ, ಭೀಮಶಪ್ಪ ಬದುಕಿರುವಾಗ ಭಾಗ ಮಾಡಿಕೊಟ್ಟಿದ್ದರು ಎಂದರೆ ಸರಿಯಲ್ಲ,

ಭೀಮಶಪ್ಪ ತೀರಿಹೋಗಿ ಸುಮಾರು 30-40 ವರ್ಷ ಆಗಿದೆ. ಬಸಮ್ಮ ತೀರಿಹೋದಾಗ ಮಲ್ಲಮ್ಮಳಿಗೆ 7-8 ವರ್ಷ ವಯಸ್ಸಾಗಿತ್ತು ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರೆದು 10-12 ವರ್ಷ ವಯಸ್ಸಿನವಳು ಇದ್ದಳು ಎಂದು ಹೇಳುತ್ತಾರೆ. ವಾದಿ ತಾಯಿ ತೀರಿಹೋದ ನಂತರ ವಾದಿ, 1 ಮತ್ತು 2ನೇ ಪ್ರತಿವಾದಿಯರನ್ನು ಅವರ ಮುತ್ಯಾ ಭೀಮಶಪ್ಪ ಬೆಳೆಸಿದ್ದಾರೆ ಎಂದರೆ ಸರಿ. ಭೀಮಶಪ್ಪನ ಮಗಳು ಬಸಮ್ಮ ಮುಂಚೆಯೇ ತೀರಿಹೋಗಿರುವ ಸಂಗತಿ ಮತ್ತು ಭೀಮಶಪ್ಪ ಬದುಕಿರುವಾಗ ದಾವಾ ಜಮೀನುಗಳನ್ನು 1 ಮತ್ತು 2ನೇ ಪ್ರತಿವಾದಿಯರಿಗೆ ಹಂಚಿಕೆ ಮಾಡಿರುವ ಸಂಗತಿ ಗೊತ್ತಿದ್ದರೂ ಕೂಡ ದಾವಾ ಜಮೀನುಗಳನ್ನು ಬಸಮ್ಮಳಿಗೆ ಕೊಟ್ಟಿದ್ದರು ಎಂದು ಸುಳ್ಳು

OS No. 43/2022

PW-2

ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳಲ್ಲಿ ಎಷ್ಟು ತುಕಡಿಗಳು ಇವೆ ಹೇಳಲು ಆಗುವುದಿಲ್ಲ. ಸರ್ವೆ ನಂಬರ 133 ರಲ್ಲಿನ 3 ಎಕರೆ 13 ಗುಂಟೆ ಒಂದೇ ಜಮೀನು ಇದೆ ಅದರಲ್ಲಿ ತುಕಡಿ ಇಲ್ಲ, ಸಾಕ್ಷಿ ಮುಂದುವರೆದು ಭಾಗ ಆಗಿಲ್ಲ ಎಂದು ಹೇಳುತ್ತಾರೆ. ಸಾಹೇಬ ತಂದೆ ಭೀಮಶಪ್ಪ ನಾಟೇಕಾರ ನಮ್ಮ ಗ್ರಾಮದವರು. ಅವರಿಗೂ ವಾದಿಯರು ಕುಟುಂಬಕ್ಕೂ ಸಂಬಂಧ ಇಲ್ಲ. ಸರ್ವೆ ನಂಬರ 133 ರಲ್ಲಿ 2 ಎಕರೆ ಜಮೀನು ಸಾಹೇಬ ತಂದೆ ಭೀಮಶಪ್ಪ ನಾಟೇಕಾರ ಹೆಸರಿನಲ್ಲಿ ಬರುತ್ತಿದೆ ಎಂದರೆ ನನಗೆ ಗೊತ್ತಿಲ್ಲ. ಸಾಹೇಬ ತಂದೆ ಭೀಮಶಪ್ಪ ನಾಟೇಕಾರ ಹೆಸರಿನಲ್ಲಿರುವ 2 ಎಕರೆ ತುಕಡಿ ಬೇರೆ ಇದೆ ಎಂದರೆ ನಾನು ನೋಡಿಲ್ಲ. 2ನೆ ಪ್ರತಿವಾದಿ 2ಎಕರೆ ಮಾರಾಟ ಮಾಡಿದ ನಂತರ ಆತನಿಗೆ 26 ಗುಂಟೆ ಉಳಿದಿದ್ದು ಅದು ಬೇರೆ ತುಕಡಿ ಇದೆ ಎಂದರೆ ಸರಿಯಲ್ಲ. 1ನೇಪ್ರತಿವಾದಿಯ ಭಾಗದ 2 ಎಕರೆ 27 ಗುಂಟೆ ಜಮೀನಿನಲ್ಲಿ 1ನೇ ಪ್ರತಿವಾದಿಗೆ ಮಕ್ಕಳು ಇಲ್ಲ ಎಂದು 2ನೇ ಪ್ರತಿವಾದಿ ಸರ್ವೆ ನಂಬರ 133 ರಲ್ಲಿನ ಪೂರ್ತಿ ಜಮೀನನ್ನು ಜಂಟಿ ಹೆಸರಿನಲ್ಲಿ ಮಾಡಿಕೊಂಡಿದ್ದರು ಎಂದರೆ ನನಗೆ ಗೊತಿಲ್ಲ . ಸರ್ವೆ ನಂಬರ 133 ರಲ್ಲಿ ಭೀಮಶಪ್ಪ ನಿಗೆ 3 ಎಕರೆ 13 ಗುಂಟೆ ಇತ್ತು. ನಾನು ಪಹಣಿ ಮತ್ತು ಜಮೀನು ನೋಡಿದ್ದೇನೆ. ನನಗೆ ಗೊತ್ತಿರುವ ಸತ್ಯ ಸಂಗತಿಗಳನ್ನು ಮರೇಮಾಚಿ ವಾದಿಗೆ ಅನುಕೂಲ ಆಗುವಂತೆ ಸುಳ್ಳು ಸಂಗತಿಗಳನ್ನು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 2ನೇ ಪ್ರತಿವಾದಿ ತನ್ನ ಬಾಗಕ್ಕೆ ಬಂದಿದ್ದ ಜಮೀನಿನ ಪೈಕಿ ಸ್ವಲ್ಪ ಜಮೀನನ್ನು ಸಾಹೇಬ ತಂದೆ ಭೀಮಶಪ್ಪ ನಾಟೇಕಾರ ರವರಿಗೆ ಮಾರಾಟ ಮಾಡಿರುವ ಸಂಗತಿ ನನಗೆ ಗೊತ್ತು ಎಂದರೆ ಸರಿಯಲ್ಲ, ನನಗೆ ಎಲ್ಲಾ ಸಂಗತಿಗಳು ಗೊತ್ತಿದ್ದರು ವಾದಿ ಮಾತು ಕೇಳಿಕೊಂಡು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳ್ಚು ಮಾಡಿಸಲಾಯಿತು)

**ಓ.ಹೇ.ಕೇ. ಸರಿ ಇದೆ.**

**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಸೇಡಂ.**